CC No.677/2023
CW-10 PW-7

**ಪ್ರಧಾನ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸೊರಬ**

**ಸಿ ಸಿ ನಂ. 677/2023**

| | | |
|---|---|---|
| **ಹೆಸರು** | :- | **ಉಷಾ** |
| **ಗಂಡನ ಹೆಸರು** | :- | **ರವಿಕುಮಾರ** |
| **ವಯಸ್ಸು** | :- | **34 ವರ್ಷ** |
| **ಉದ್ಯೋಗ** | :- | **ಗೃಹಣಿ** |
| **ಸ್ಥಳ** | :- | **ಓಟೂರು** |

**ದಿನಾಂಕಃ 10.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಭಾವನ ಮಗ. ಚಾಸಾ-4 ನನ್ನ ಅಕ್ಕ. ಚಾಸಾ-5 ರಿಂದ 7 ರವರು ನನ್ನ ಭಾವನ ಮಕ್ಕಳು. ಚಾಸಾ-8 ನನ್ನ ಪಕ್ಕದ ಮನೆಯವರು. ಚಾಸಾ-9 ನನ್ನ ಅಕ್ಕ. ದಿಃ21.06.2022 ರಂದು ನಾವು ಮನೆಯಲ್ಲಿದ್ದಾಗ ಆರೋಪಿತರು ನಮ್ಮ ಮನೆಯ ಹತ್ತಿರ ಬಂದು ಅವಾಚ್ಯ ಶಬ್ದಗಳಿಂದ ಬೈದು, ಆರೋಪಿತರು ನನಗೂ ಮತ್ತು ಚಾಸಾ-1, 4 ಜಾನಕಮ್ಮ, ಚಾಸಾ-5 ಸಂಜಯ, ಚಾಸಾ-7 ಸಂಜಿತ, ಚಾಸಾ-8 ಶಾಂತಮ್ಮ, ಚಾಸಾ-9 ಶಾರದ ರವರಿಗೆ ಹಲ್ಲೆ ಮಾಡಿರುತ್ತಾರೆ. ನಾವು ಬಿಡಿಸಲು ಹೋದಾಗ ಆರೋಪಿತರು ನಮ್ಮ ಬೈಕನ್ನು ಹಾಳು ಮಾಡಿ, ಬಾಗಿಲುಗಳನ್ನು ಹೊಡೆದಿರುತ್ತಾರೆ. ನಂತರ ನಾವು ಆಂಬ್ಯುಲೆನ್ಸ್‌ನಲ್ಲಿ ಹೋಗಿ ಸೊರಬ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿರುತ್ತೇವೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಪುನಃ ನೋಡಿ ಗುರುತಿಸಿರುತ್ತೇನೆ.

ನನ್ನನ್ನು ಈ ವಿಚಾರವಾಗಿ ಪೊಲೀಸರು ವಿಚಾರಣೆ ಮಾಡಿದ್ದು, ನಾನು ಹೇಳಿಕೆ ನೀಡಿರುತ್ತೇನೆ.

(**ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ಭಾಗಶಃ ಪ್ರತಿಕೂಲ ಸಾಕ್ಷಿ ನುಡಿದ ಕಾರಣ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೋರಿದ್ದು, ಸಾಕ್ಷಿಯು ಅಭಿಯೋಜನಾ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷಿ ನುಡಿದ ಕಾರಣ ಪಾಟಿ ಸವಾಲಿಗೆ ಅನುಮತಿ ನೀಡಲಾಯಿತು**).

**ಪಾಟಿ ಸವಾಲುಃ ಮಾನ್ಯ ಸ.ಸ.ಅಭಿಯೋಜಕವರಿಂದಃ**

ಚಾಸಾ-1 ರವರನ್ನು 1 ರಿಂದ 9 ನೆ ಆರೋಪಿತರು ಕೈಗಳಿಂದ ಮೈಕೈಗೆ ಹಲ್ಲೆ ಮಾಡಿರುತ್ತಾರೆ ಅಂದರೆ ಸರಿ. ಆಗ ಚಾಸಾ-4 ರವರು ಗಲಾಟೆಯನ್ನು ಬಿಡಿಸಲು ಹೋದಾಗ 15 ನೇ ಆರೋಪಿ ದೇವಮ್ಮ ರವರು ಚಾಸಾ-4 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ ಹಲ್ಲೆ ಮಾಡಿರುತ್ತಾರೆ ಅಂದರೆ ಸರಿ. ಆರೋಪಿತರು ಕೈಗಳಿಂದ ನಮಗೆ ಮತ್ತು ಕಾಲಿನಿಂದ ಒದ್ದು ಹಲ್ಲೆ ಮಾಡಿರುತ್ತಾರೆ ಅಂದರೆ ಸರಿ. ಅವರು ಯಾವುದೇ ದೊಣ್ಣೆಗಳನ್ನು ತಂದಿರುವುದಿಲ್ಲ ಅಂದರೆ ಸರಿ. ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ ಅಂದರೆ ಸರಿ.

**ಪಾಟಿ ಸವಾಲುಃ ಆರೋಪಿ ಪರ ಶ್ರೀ. ಪಿ.ಎಸ್.ಕೆ. ವಕೀಲರಿಂದಃ**

ಚಾಸಾ-2, 4, 5, 7, 8 ರಿಂದ 10 ಹಾಗೂ ನಾನು ಒಂದೇ ಮನೆತನದವರು ಅಂದರೆ ಸರಿ. ಸ.ನಂ.337 12 ನೇ ಆರೋಪಿಗೆ ಸೇರಿದ ಜಮೀನು ಅಂದರೆ ಸರಿಯಲ್ಲ. ಸ.ನಂ.8 ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಜಮೀನು ಅಂದರೆ ಸರಿ. ಸದರಿ ಸರ್ವೆ ನಂಬರ್

ಗಳು ಅಕ್ಕಪಕ್ಕದ ಜಮೀನುಗಳು ಅಂದರೆ ಸರಿ. ಸ.ನಂ.337 ಕ್ಕೆ ಸಂಬಂಧಿಸಿದಂತೆ ಆರೋಪಿತರ ಹಾಗೂ ಚಾಸಾ–2 ರಿಂದ 10 ರವರ ನಡುವೆ ಹಲವಾರು ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಇವೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಸ.ನಂ.337 ಕ್ಕೆ ಸಂಬಂಧಿಸಿದಂತೆ ಚಾಸಾ–2 ರಿಂದ 10 ರವರು ಆರೋಪಿತರ ಮೇಲೆ ಆಗಾಗ ಗಲಾಟೆ ಮಾಡಿರುತ್ತೀರಿ ಅಂದರೆ ಸರಿಯಲ್ಲ. ಆ ಸಂಬಂಧ ನಮ್ಮ ಕುಟುಂಬದವರ ಮೇಲೆ ಹಲವಾರು ಕ್ರಿಮಿನಲ್ ಮೊಕದ್ದಮೆಗಳು ದಾಖಲಾಗಿವೆ ಅಂದರೆ ಸರಿಯಲ್ಲ. ಸಿ.ಸಿ.ನಂ.678/2023 ರಲ್ಲಿ ನಾನು 10 ನೇ ಆರೋಪಿತಳು ಅಂದರೆ ಹೌದು. ಸ.ನಂ.337 ರಲ್ಲಿ ರವಿ ಮತ್ತು ಕೃಷ್ಣಪ್ಪ ರವರು ಅಕ್ರಮವಾಗಿ ಪ್ರವೇಶಿಸಿ ದನಗಳನ್ನು ಮೇಯಿಸುತ್ತಿದ್ದರು ಅಂದರೆ ಸರಿ. ಆ ಕಾರಣ 1 ಮತ್ತು 12 ನೇ ಆರೋಪಿತರು ಪ್ರಶ್ನೆ ಮಾಡಿದ್ದಕ್ಕೆ ಹಲ್ಲೆ ಮಾಡಿರುತ್ತೀರಿ ಅಂದರೆ ಸರಿಯಲ್ಲ. ನಾನು ಸಹ 12 ನೇ ಆರೋಪಿತಳಿಗೆ ಕೈಯಿಂದ ಹಲ್ಲೆ ಮಾಡಿ, ನೆಲಕ್ಕೆ ಕೆಡವಿರುತ್ತೇನೆ ಅಂದರೆ ಸರಿಯಲ್ಲ. ನಾವೇ ಆರೋಪಿತರ ವಿರುದ್ಧ ಗಲಾಟೆ ಮಾಡಿದ್ದರೂ ಸಹ ಆರೋಪಿತರೇ ಹಲ್ಲೆ ಮಾಡಿ ಗಲಾಟೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ಆರೋಪಿತರು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಅಂದರೆ ಸರಿಯಲ್ಲ. ಆರೋಪಿತರು ಯಾವುದೇ ಗಲಾಟೆ ಮಾಡದಿದ್ದರು ಸಹ ಅವರ ವಿರುದ್ಧ ಸುಳ್ಳು ಸಾಕ್ಷ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಕಂಪ್ಯೂಟರೀಕರಿಸಲಾಯ್ತು).

**ಓ.ಹೇ.ಕೇ. ಸರಿ ಇದೆ ಎಂದು ಒಪ್ಪಿದ್ದಾರೆ.**

**ಪ್ರಧಾನ ವ್ಯವಹಾರ ನ್ಯಾ ಮತ್ತು ಜೆ.ಎಂ.ಎಫ್.ಸಿ**
**ಸೊರಬ.**